# ಭೂಮಿಯ ಮೇಲಿನ ಬಣ್ಣ



ಬಣ್ಣಗಳು ಮಾರಾಟಕ್ಕಿವೆ
ಕೊಳ್ಳುವವರು ಯಾರಾದರೂ ಇದ್ದರೆ ಹೇಳಿ

ಎಷ್ಟೊಂದು ಬಣ್ಣಗಳು
ಲೆಕ್ಕವಿಡಲು ಓದಬೇಕು ಎರಡರ ಮಗ್ಗಿ
ಅಂಕಗಣಿತವೆ ಇದಕ್ಕೆ ಮದ್ದು ಗುದ್ದು

ಬಣ್ಣ ಬಣ್ಣ ಬಣ್ಣ
ಪ್ರಾಣಿ ಪಕ್ಷಿಗಳ ಬಣ್ಣ
ಗಿಡ, ಮರ, ಹೂವು, ಕಾಯಿ, ಹಣ್ಣುಗಳ ಬಣ್ಣ
ಹಳ್ಳ, ಕೊಳ್ಳ, ನದಿ, ಸಾಗರಗಳ ಬಣ್ಣ
ಬಣ್ಣಗಳ ಮೇಲೆ ನಡದಿಲ್ಲವೇ
ತರಾವರಿ ಯುದ್ಧ

ವರನ ಬಣ್ಣ ವಧುವಿನ ಬಣ್ಣ
ಜನಾಂಗೀಯ ಬಣ್ಣ
ಕಾಲದ ಬಣ್ಣ
ಕಾಲಾತೀತವಾದ ಬಣ್ಣ

ಸೂರ್ಯ, ಚಂದ್ರ
ಭೂಮಿಗಳದ್ದಂತೂ
ಯಾರ ಕೈಗೆ ಎಟುಕದ ಬಣ್ಣ

ಎಲ್ಲ ಬಣ್ಣಗಳು
ನೆಲದೊಡಲಿಂದಲೇ ಅರಳಬೇಕು
ಬುವಿ ಬಾನಿಗೆ ನೆಗೆದು
ಚಿತ್ತಾರ ಬಿಡಿಸಬೇಕು
ಕಾಮನ ಬಿಲ್ಲು
ಕಣ್ಮುಂದೆ ಕುಣಿಸಬೇಕು

ವೈವಿಧ್ಯತೆಯಲಿ ಏಕತೆ
ಏಕತೆಯಲಿ ವೈವಿಧ್ಯತೆಯೇ
ವಸುಂಧರೆಯ ಬಣ್ಣ
ಚರ್ಮಕ್ಕೇನೋ ಇದೆ ಬಣ್ಣ
ಅಂತರಂಗಕ್ಕೆಲ್ಲಿದೆ ಬಣ್ಣ

ಬಯಲಿನಲಿಯೇ ಹುಟ್ಟಿ
ಬಯಲಿನಲಿಯೇ ಬಿತ್ತಿ ಬೆಳೆದು
ಬಟಾಬಯಲಾಗುವುದಕೆ
ಯಾವ ಬಣ್ಣ, ಯಾತರ ಬಣ್ಣ

ಭೂಮಿಯ ಮೇಲೆ
ಎಷ್ಟೊಂದು ಬಣ್ಣ
ಭೂಮಿಯೊಳಗೆ
ಏನಿರುವುದೋ ಅಣ್ಣ

**● ಸತ್ಯಾನಂದ ಪಾತ್ರೋಟ**
ಕಲೆ: ವಾಗೀಶ ಹೆಗಡೆ